KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2022

website: kud.ac.in

No. KU/Aca(S&T)/SSL-445/UGCE/2023-24/ 100 Date: 16/10/2023

## ಪರಿಷ್ಕೃತ ಸುತ್ತೋಲೆ-3

ವಿಷಯ: 2023–24ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲ ಸ್ನಾತಕ ಪದವಿಗಳ 3 ಮತ್ತು 5ನೇ ಸೆಮಿಸ್ಟರ್‌ಗಳ ತರಗತಿಗಳಿಗೆ ಪ್ರವೇಶ ದಿನಾಂಕವನ್ನು ವಿಸ್ತರಿಸುವ ಹಾಗೂ ಶುಲ್ಕವನ್ನು ಭರಿಸುವ ವಿಧಾನ ಕುರಿತು.

ಉಲ್ಲೇಖ: 1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-445 /2023-24/955, ದಿ. 15.09.2023.
2. ಕಚೇರಿ ಸುತ್ತೋಲೆ ಸಂ.KU/Aca(S&T)/SSL-445 /2023-24/82, ದಿ. 05.10.2023.
3. ಕಚೇರಿ ಸುತ್ತೋಲೆ ಸಂ.KU/Aca(S&T)/SSL-445 /2023-24/1110, ದಿ. 11.10.2023.
4. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 16/10/2023

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2023–24ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲ ಸ್ನಾತಕ ಪದವಿಗಳ 3 ಮತ್ತು 5ನೇ ಸೆಮಿಸ್ಟರ್‌ಗಳ ತರಗತಿಗಳಿಗೆ UUCMS ಮುಖಾಂತರ ಪ್ರವೇಶದ ಕೊನೆಯ ದಿನಾಂಕವನ್ನು ಉಲ್ಲೇಖ 2ರ ಪ್ರಕಾರ ಈಗಾಗಲೇ ವಿಸ್ತರಿಸಲಾಗಿತ್ತು. ಆದರೆ, UUCMS ನಲ್ಲಿ ತಾಂತ್ರಿಕ ತೊಂದರೆಗಳಿಂದ ಸದರಿ ತರಗತಿಗಳಿಗೆ **ದಂಡ ರಹಿತ** ಪ್ರವೇಶದ ಕೊನೆಯ ದಿನಾಂಕವನ್ನು **21.10.2023ರ** ವರೆಗೆ ವಿಸ್ತರಿಸಲಾಗಿದೆ. ಹಾಗೂ ಈಗಾಗಲೇ ಪ್ರಕಟಿಸಿದ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸದರಿ ವಿದ್ಯಾರ್ಥಿಗಳು UUCMS ಮುಖಾಂತರ ಶುಲ್ಕ ಭರಿಸಲು ತಾಂತ್ರಿಕ ತೊಂದರೆಯಾಗಿರುವುದರಿಂದ ಈ ಕೆಳಗಿನ ಮಾರ್ಗಸೂಚಿಗಳನ್ನು ಅನುಸರಿಸುವುದು.

1. **3 ಮತ್ತು 5ನೇ ಸೆಮಿಸ್ಟರ್‌ನ ನಿಯಮಿತ ವಿದ್ಯಾರ್ಥಿಗಳು:** 3 ಮತ್ತು 5ನೇ ಸೆಮಿಸ್ಟರ್‌ನ ನಿಯಮಿತ (Regular) ವಿದ್ಯಾರ್ಥಿಗಳು UUCMS ಮುಖಾಂತರ ಅರ್ಜಿ ಸಲ್ಲಿಸುವುದು. ಆದರೆ, ಶುಲ್ಕವನ್ನು UUCMS ಮುಖಾಂತರ ಭರಿಸದೇ SB Collect ಮುಖಾಂತರ ಪ್ರತಿ ವಿದ್ಯಾರ್ಥಿಯು ಪ್ರತ್ಯೇಕವಾಗಿ ಶುಲ್ಕ ಭರಿಸಿ ರಶೀದಿಯನ್ನು ಸ್ಕ್ಯಾನ್ ಮಾಡಿ UUCMS Portal ನಲ್ಲಿ upload ಮಾಡುವುದು ಹಾಗೂ ಪ್ರಾಚಾರ್ಯರು ರಶೀದಿಯನ್ನು ಪರಿಶೀಲಿಸಿ ಪ್ರವೇಶವನ್ನು Approve ಮಾಡುವುದು. ಸದರಿ ರಶೀದಿಯ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಮಹಾವಿದ್ಯಾಲಯದವರು ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಯಾದಿಗಳೊಂದಿಗೆ ಸಲ್ಲಿಸುವುದು.
2. **3 ಮತ್ತು 5ನೇ ಸೆಮಿಸ್ಟರ್‌ನ ನಿಯಮಿತ ವಿದ್ಯಾರ್ಥಿಗಳ Promote ನ ನ್ಯೂನ್ಯತೆ:** UUCMS ನಲ್ಲಿ ತಾಂತ್ರಿಕ ತೊಂದರೆಗಳಿಂದ ಕೆಲವು ವಿದ್ಯಾರ್ಥಿಗಳ ಸಂಖ್ಯೆಯು ಅಕಸ್ಮಾತಾಗಿ (**By chance**) ಈಗಾಗಲೇ 5ನೇ ಸೆಮಿಸ್ಟರ್‌ಗೆ Promote ಆಗಿ ಶುಲ್ಕವನ್ನು ಭರಿಸಲು ಅವಕಾಶವಿರದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು 4ನೇ ಸೆಮಿಸ್ಟರ್‌ಗೆ De-promote ಮಾಡಿ ಮತ್ತೆ 5ನೇ ಸೆಮಿಸ್ಟರ್‌ಗೆ Promote ಮಾಡಿ ಈ ಮೇಲಿನಂತೆ ಶುಲ್ಕವನ್ನು ಭರಿಸುವುದು.
3. **ವರ್ಗಾವಣೆಗೆ ಸಂಬಂಧಪಟ್ಟಂತೆ:** ಈಗಾಗಲೇ ಪ್ರಕಟಿಸಿದ ಪ್ರವೇಶ ಮಾರ್ಗಸೂಚಿ ಅನುಸಾರ 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ವರ್ಗಾವಣೆ ಬಯಸುವ ವಿದ್ಯಾರ್ಥಿಗಳಿಗೆ ಎರಡು ಮಹಾವಿದ್ಯಾಲಯಗಳ ಪ್ರಾಚಾರ್ಯರ ಒಪ್ಪಿಗೆ (Annexure-10) ಹಾಗೂ ವರ್ಗಾವಣೆಗೆ ನಿಗದಿತ ಶುಲ್ಕವನ್ನು SB Collect ಮುಖಾಂತರ ಭರಿಸುವುದರೊಂದಿಗೆ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದುಕೊಂಡ **ನಂತರ ಮಾತ್ರ** ಕಳೆದ ಸಾಲಿನ ಮಾರ್ಗಸೂಚಿಗಳನ್ನು ಅನುಸರಿಸಿ ದಿನಾಂಕ: 21.**10.2023ರ** ಒಳಗಾಗಿ ಪ್ರವೇಶಕ್ಕಾಗಿ ನಿಗದಿಪಡಿಸಿದ ಶುಲ್ಕವನ್ನು SB Collect ಮುಖಾಂತರ ಭರಿಸಿಕೊಂಡು ಭೌತಿಕವಾಗಿ ಪ್ರವೇಶ ಪಡೆದುಕೊಳ್ಳುವುದು ಹಾಗೂ ಸದರಿ ವಿದ್ಯಾರ್ಥಿಗಳ ಹಿಂದಿನ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟವಾದ ನಂತರ ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯ ಸೂಚಿಸಿದ ದಿನಗಳೆಂದು UUCMS ಮುಖಾಂತರ ಅರ್ಜಿ ಸಲ್ಲಿಸುವುದು.

ಪು.ತಿ.ನೋ.

4. Lateral Entry **ಗೆ ಸಂಬಂಧಪಟ್ಟಂತೆ:** CBCS / Non CBCS ವಿದ್ಯಾರ್ಥಿಗಳು Lateral Entry ಮುಖಾಂತರ NEP Scheme ನ 3 / 5ನೇ ಸೆಮಿಸ್ಟರ್‌ಗೆ ನಿಯಮಾನುಗಳನುಸಾರ ಪ್ರವೇಶ ಬಯಸಿದ್ದಲ್ಲಿ SB Collect ಮುಖಾಂತರ ಶುಲ್ಕವನ್ನು ಭರಿಸಿ ಭೌತಿಕವಾಗಿ ಪ್ರವೇಶ ಪಡೆದಕೊಳ್ಳುವುದು ಹಾಗೂ ಅಂತಹ Non-NEP ವಿದ್ಯಾರ್ಥಿಗಳ ಮಾಹಿತಿಯನ್ನು ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯ ಸೂಚಿಸಿದ ದಿನಗಳಂದು UUCMS ಮುಖಾಂತರ NEP ಅಡಿಯಲ್ಲಿ ಅರ್ಜಿ ಸಲ್ಲಿಸುವುದು.
5. **NEP ಅಡಿಯಲ್ಲಿ ಪ್ರವೇಶ ಪಡೆದು ವಿದ್ಯಾಭ್ಯಾಸ ಮೊಟಕುಗೊಳಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ:** ಈ ಹಿಂದಿನ ವರ್ಷಗಳಲ್ಲಿ NEP ಅಡಿಯಲ್ಲಿ UUCMS ಮುಖಾಂತರ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು ಪದವಿ ಅಧ್ಯಯನವನ್ನು ಮೊಟಕುಗೊಳಿಸಿ ಸದರಿ ವರ್ಷದಲ್ಲಿ ಅಭ್ಯಾಸವನ್ನು ಮುಂದುವರೆಸಲು ಇಚ್ಛಿಪಟ್ಟಲ್ಲಿ ನಿಯಮಾನುಸಾರ UUCMS ಮುಖಾಂತರ ಸಂಬಂಧಪಟ್ಟ ಸೆಮಿಸ್ಟರ್‌ಗಳ ವರ್ಷವನ್ನು ಆಯ್ಕೆ ಮಾಡಿ UUCMS ನಲ್ಲಿ ಅವಕಾಶವಿರುವ Re-admission ನ್ನು ಉಪಯೋಗಿಸಿ ದಿನಾಂಕ: **21.10.2023**ರ ಒಳಗಾಗಿ ಶುಲ್ಕವನ್ನು SB Collect ಮುಖಾಂತರ ಭರಿಸಿ ಪ್ರವೇಶ ಪಡೆದಕೊಳ್ಳುವುದು.
6. ಈಗಾಗಲೇ 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ಪ್ರವೇಶಕ್ಕಾಗಿ ಮಹಾವಿದ್ಯಾಲಯದ ಹಂತದಲ್ಲಿ ವಿದ್ಯಾರ್ಥಿಗಳಿಂದ ನಿಗದಿ ಪಡಿಸಿದ ಶುಲ್ಕವನ್ನು ಪಡೆದುಕೊಂಡು ಈ ಹಿಂದಿನಂತೆ Single Challan ನಲ್ಲಿ SB Collect ಮುಖಾಂತರ ವಿಶ್ವವಿದ್ಯಾಲಯಕ್ಕೆ ಶುಲ್ಕವನ್ನು ಭರಿಸಿದ್ದಲ್ಲಿ ಸದರಿ ಚಲನ್‌ನ್ನು ಪ್ರತಿ ವಿದ್ಯಾರ್ಥಿಯ ರಶೀದಿಯೆಂದು ಪರಿಗಣಿಸಿ UUCMS Portal ನಲ್ಲಿ upload ಮಾಡುವುದು.
7. ಈ ಮೇಲಿನ ವಿಷಯಗಳನ್ನು ಹೊರತುಪಡಿಸಿ ಬೇರೆ ರೀತಿಯ ತೊಂದರೆಗಳು ಉದ್ಭವಿಸದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಭೌತಿಕವಾಗಿ ಪಡೆದುಕೊಂಡು ವಿಶ್ವವಿದ್ಯಾಲಯಕ್ಕೆ ಪ್ರವೇಶಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಲಿಖಿತವಾಗಿ ತಿಳಿಸುವುದು.

ಮುಂದುವರೆದು, (1) ರೂ. 670/–ರ ದಂಡದೊಂದಿಗೆ ಪ್ರವೇಶದ ಕೊನೆಯ ದಿನಾಂಕ: 30.10.2023.

(2) ರೂ. 4,670/–ರ ಹೆಚ್ಚುವರಿ ದಂಡದೊಂದಿಗೆ ಪ್ರವೇಶದ ಕೊನೆಯ ದಿನಾಂಕ: 03.11.2023.

ಈ ಮೇಲಿನಂತೆ ಪ್ರವೇಶ ಪಡೆದುಕೊಂಡ ಎಲ್ಲ ವಿದ್ಯಾರ್ಥಿಗಳ ಮಾಹಿತಿಗಳನ್ನು ಎಲ್ಲ ದಾಖಲೆಗಳೊಂದಿಗೆ ದಿನಾಂಕ: 05.11.2023ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

16/10/23

ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.